ದಿನಾಂಕಃ 27.07.2026

ಅಸಲುದಾವಃ 115/2024

ಪಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ದೊಡ್ಡನಂಜೇಗೌಡರು ಮಕ್ಕಳು ಭಾಗವಾಗಿ ಎಷ್ಟು ವರ್ಷವಾಯಿತು ಎಂದರೆ ಸಾಕ್ಷಿ ಒಬ್ಬರು ಕರಿಗೌಡರು ಮಾತ್ರ ಭಾಗವಾಗಿದ್ದಾರೆ, ಸುಮಾರು 50 ವರ್ಷಗಳಾಗಿವೆ ಎಂದು ಉತ್ತರಿಸುತ್ತಾರೆ. ದೊಡ್ಡನಂಜೇಗೌಡರ ಮಕ್ಕಳಾದ ಗೂಳಿಗೌಡ ಮತ್ತು ದ್ಯಾಪೇಗೌಡರು ಒಟ್ಟಿಗೆ ಇದ್ದರು ಎಂಬ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ದಾಖಲೆ ಏನೂ ಇಲ್ಲ ಒಟ್ಟಿಗೆ ಇದ್ದೇವೆ ಎಂದು ಉತ್ತರಿಸುತ್ತಾರೆ. ಗೂಳಿಗೌಡರು ಅವರ ಮಗಳು ಸಾವಿತ್ರಮ್ಮನವರಿಗೆ ಹೊಸಕೆರೆಯಲ್ಲಿ ಎಷ್ಟು ಎಕರೆ ಜಮೀನು ಕೊಟ್ಟಿದ್ದರು ಎಂದರೆ ಸಾಕ್ಷಿ ಆರ್.ಟಿ.ಸಿಯಲ್ಲಿ 2 ಎಕರೆ 3 ಗುಂಟೆ ಎಂದು ನಮೂದಿದೆ, ಕೋರ್ಟ್‌ಗೆ ಬರುವವರೆಗೂ ನನಗೆ ಗೊತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಜಮೀನನ್ನು ಗೂಳಿಗೌಡರು ಸಾವಿತ್ರಮ್ಮನವರಿಗೆ ಯಾವ ದಾಖಲೆ ಆದಾರದ ಮೇಲೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಮಗಳು ಎನ್ನುವ ಆದಾರದ ಮೇಲೆ ಕೊಟ್ಟಿದ್ದಾರೆ ಈ ನ್ಯಾಯಾಲಯಕ್ಕೆ ಬಂದ ಮೇಲೆ ಗೊತ್ತಾಯಿತು ಎಂದು ಉತ್ತರಿಸುತ್ತಾರೆ.

2. ಗೂಳಿಗೌಡರ ಹೆಂಡತಿ ಬುಚ್ಚಮ್ಮ ಎಂದರೆ ಸರಿ. ನಾನು 9 ನೇ ತರಗತಿಯವರೆಗೆ ಓದಿದ್ದೇನೆ. ಗೂಳಿಗೌಡರು ಸಹಿ ಮಾಡುತ್ತಿದ್ದರು ಎಂದರೆ ಸರಿ. ಗೂಳಿಗೌಡರು 1992 ರಲ್ಲಿ ತೀರಿಕೊಂಡಿರುತ್ತಾರೆ. ಹೊಟ್ಟೇನಂಜೇಗೌಡರ ಮಗ ಗೂಳಿಗೌಡರು ಎಂದರೆ ನನ್ನ ದೊಡ್ಡಪ್ಪ. ಸದರಿ ಹೊಟ್ಟೇನಂಜೇಗೌಡರ ಮಗ ಗೂಳಿಗೌಡರು 1991 ರಲ್ಲಿ ಒಂದು ವಿಲ್ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ನೀವು ಓದಿ ಹೇಳಿದ ಮೇಲೆ ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ಗೂಳಿಗೌಡರು ತಮ್ಮ ಮಗಳು ಸಾವಿತ್ರಮ್ಮ ಹಾಗೂ ಚಿಕ್ಕತಮ್ಮಯ್ಯನವರಿಗೆ ಅವರ ಭಾಗದ ಆಸ್ತಿಯನ್ನು ವಿಲ್ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಈ ದಾವೆಯಲ್ಲಿ ನೀವು ಗೂಳಿಗೌಡರು ಚಿಕ್ಕತಮ್ಮಯ್ಯನವರಿಗೆ ವಿಲ್ ಮೂಲಕ ಕೊಟ್ಟ ಆಸ್ತಿಗಳನ್ನು ಮಾತ್ರ ಸೇರಿಸಿದ್ದೀರಿ ಸಾವಿತ್ರಮ್ಮನವರಿಗೆ ವಿಲ್ ನಲ್ಲಿ ಕೊಟ್ಟ ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಸಾಕ್ಷಿ ಸೇರಿಸಿದ್ದೇನೆ ಎಂದು ಉತ್ತರಿಸುತ್ತಾರೆ. 1992 ರಲ್ಲಿ ಗೂಳಿಗೌಡರು ತೀರಿಕೊಂಡ ನಂತರ ಸದರಿ ವಿಲ್ ಕಾರ್ಯಾಚರಣೆಗೆ ಬಂದಿರುತ್ತದೆ ಎಂದರೆ ಸಾಕ್ಷಿ ಕಾರ್ಯಾಚರಣೆಗೆ ಬಂದಿರುವುದಿಲ್ಲ, ನಾವು ಈಗಲೂ

ಜಂಟಿಯಾಗಿದ್ದೇನೆ ಎಂದು ಉತ್ತರಿಸುತ್ತಾರೆ. ಚಿಕ್ಕತಮ್ಮಯ್ಯನವರಿಗೆ ವಿಲ್ ಮೂಲಕ ಬಂದ ಆಸ್ತಿಗಳು ಎಂ.ಆರ್.20/1993-94 ರಂತೆ ಖಾತೆಯಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನೀವು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಆರ್.ಟಿ.ಸಿಗಳಲ್ಲಿ ವಿಲ್ ವಿಚಾರ ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

3. ನಿಮ್ಮ ತಂದೆಯ ಭಾಗಕ್ಕೆ ಬಂದ ಆಸ್ತಿಗಳು ನಿಮ್ಮ ತಂದೆಯ ಹೆಸರಿನಲ್ಲಿಯೇ ಆರ್.ಟಿ.ಸಿಗಳು ಇವೆ ಎಂದರೆ ಸಾಕ್ಷಿ ಈ ಕೇಸು ಹಾಕಲು ಆರ್.ಟಿ.ಸಿ ತೆಗೆದುಕೊಂಡಾಗಲೆ ಅದು ಗೊತ್ತಾಗಿದ್ದು ಎಂದು ಉತ್ತರಿಸುತ್ತಾರೆ. ಚಿಕ್ಕತಮ್ಮಯ್ಯ ತೀರಿಕೊಂಡ ಬಳಿಕ ಅವರ ಹೆಂಡತಿಯ ಹೆಸರಿಗೆ ಕೆಲವು ಆಸ್ತಿಗಳು ಖಾತೆ ವರ್ಗಾವಣೆಯಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಈ ಕೇಸನ್ನು ನೀವು ಚಿಕ್ಕತಮ್ಮಯ್ಯನವರಿಗೆ ವಿಲ್ ಮೂಲಕ ಬಂದ ಆಸ್ತಿಗಳು ಹಾಗು ನಿಮ್ಮ ತಂದೆ ದ್ಯಾಪೇಗೌಡರಿಗೆ ಬಂದಿರುವ ಆಸ್ತಿಗಳು ಎರಡನ್ನೂ ಸೇರಿ ಈ ದಾವೆ ಹಾಕಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಚಿಕ್ಕತಮ್ಮಯ್ಯನವರಿಗೆ ನಿಮ್ಮ ತಂದೆಯ ಭಾಗದ ಆಸ್ತಿಯಲ್ಲೂ ಭಾಗಾಂಶವಿದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಚಿಕ್ಕತಮ್ಮಯ್ಯನವರಿಗೆ ವಿಲ್ ಮೂಲಕ ಬಂದ ಆಸ್ತಿಗಳಲ್ಲಿ ನಿಮಗೆ ಯಾವುದೇ ಹಕ್ಕಿಲ್ಲ ಸಾಧ್ಯವಾದರೆ ಚಿಕ್ಕತಮ್ಮಯ್ಯನವರ ಹೆಂಡತಿ ಮಕ್ಕಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಕೇಸು ಹಾಕಿದ್ದೀರಿ ಎಂದರೆ ಸಾಕ್ಷಿ ಇಲ್ಲ, ನನ್ನ ದೊಡ್ಡಪ್ಪ, ದೊಡ್ಡಮ್ಮನವರ ಯೋಗಕ್ಷೇಮ ಮತ್ತು ಮಕ್ಕಳ ವಿದ್ಯಾಭ್ಯಾಸವನ್ನು ನಾವೂ ನೋಡಿದ್ದೇವೆ ಎಂದು ಉತ್ತರಿಸುತ್ತಾರೆ. ಚಿಕ್ಕತಮ್ಮಯ್ಯ ಗೂಳಿಗೌಡರ ಜೊತೆ ವಾಸವಿದ್ದರು ನೀವು ದ್ಯಾಪೇಗೌಡರ ಜೊತೆ ವಾಸವಿದ್ದಿರಿ ಎಂದರೆ ಸಾಕ್ಷಿ ನಾವೇಲ್ಲರೂ ಒಟ್ಟಿಗೆ ಇದ್ದೆವು, ಈಗಲೂ ಒಟ್ಟಿಗೆ ಇದ್ದೇವೆ ಎಂದು ಉತ್ತರಿಸುತ್ತಾರೆ. ಗೂಳಿಗೌಡರು ತೀರಿಕೊಂಡ ನಂತರ ಅವರ ತಿಥಿ ಇತ್ಯಾದಿ ಕರ್ಮಾಂತರಗಳನ್ನು ಚಿಕ್ಕತಮ್ಮಯ್ಯನವರು ಮಾಡಿದ್ದರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.